ಓ.ಎಸ್. ನಂ. 68/2012
ಪಿ ಡಬ್ಲ್ಯೂ: 01 (Rekha)

ದಿನಾಂಕಃ 27.02.2025 ರಂದು ಮುಂದುವರೆದ ಮುಖ್ಯ ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ – ಶ್ರೀ TM ವಕೀಲರಿಂದ.

ಸಾಕ್ಷ್ಯ ರೂಪದಲ್ಲಿ ಹಾಜರುಪಡಿಸಿರುವ ನನ್ನ ಹೆಚ್ಚುವರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ತಿಳಿದುಕೊಂಡು ನಾನು ನನ್ನ ಸಹಿ ಮಾಡಿದ್ದೇನೆ.

ಮುಂದುವರೆದ ಮುಖ್ಯ ವಿಚಾರಣೆಃ ಮುಕ್ತಾಯ.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ ಕೆ ವಕೀಲರಿಂದಃ

ಈ ದಾವೆಯನ್ನು ನನ್ನ ತಂದೆಯ ಒಡಹುಟ್ಟಿದವರ ಮೂಲಕ ಸಲ್ಲಿಸಿರುತ್ತೇನೆ. ನನ್ನ ತಂದೆಯ ಒಡಹುಟ್ಟಿದವರು ಕೆಂಚಪ್ಪ, ಪರಸಪ್ಪ, ರಾಮಪ್ಪ, ಈರಮ್ಮ, ಹನುಮಕ್ಕ, ಶಾಂತಮ್ಮ. ಹೊಲಕ್ಕೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿದ್ದು, ಅವು ಒಟ್ಟು 15 ಸರ್ವೆ ನಂಬರುಗಳು ಹಾಗೂ ಒಟ್ಟು 50 ಎಕರೆ ಇವೆ. ಅದರ ವಿಸ್ತೀರ್ಣ ಹಾಗೂ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ನಾನು ಸದರಿ ಸರ್ವೆ ನಂಬರುಗಳನ್ನು ಉಳುಮೆ ಮಾಡುತ್ತಿಲ್ಲ ಎಂದರೆ ಹೌದು. ಭಾಗ ಕೇಳಿ ದಾವೆಯನ್ನು ಸಲ್ಲಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.